# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ಸಾ.ಸ./3/2008-09 ದಿನಾಂಕ:29-01-2009

## -:: ಸಾಮಾನ್ಯ ಸಭೆ ::-

ದಿನಾಂಕ:29-01-2009ರಂದು ಗುರುವಾರ 11.00ಗಂಟೆಗೆ ಸರಿಯಾಗಿ ನಗರಸಭೆಯ ಸಭಾಂಗಣ ದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಜಿ. ರಾಮಕೃಷ್ಣರವರ** ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಯು ಸಮಯಾವಕಾಶದ ಅಭಾವದಿಂದ ದಿನಾಂಕ:12-02-2009 ರಂದು ಮುಂದುವರೆದು ನಡೆದ ಸಭೆಯಲ್ಲಿ ಮಾನ್ಯ ನಗರಸಭಾ ಉಪಾಧ್ಯಕ್ಷರು ಹಾಗೂ ನಗರಸಭಾ ಸದಸ್ಯರುಗಳ ಸಮ್ಮುಖದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಕೆಗಳು :-

**ದಿನಾಂಕ:29-01-2009ರಂದು ನಡೆದ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

| ಸದಸ್ಯರುಗಳು | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| | 30 | 01 | 31 |

ಪ್ರಥಮವಾಗಿ ಪೌರಾಯುಕ್ತರಾದ **ಶ್ರೀ ಎಸ್.ಜಿ.ರಾಜಶೇಖರ್,** ಕೆ.ಎಂ.ಎ.ಎಸ್.ರವರು ಸಭೆಯಲ್ಲಿ ಮಾತನಾಡಿ, ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ನಗರಸಭಾ ಮಾನ್ಯ ಅಧ್ಯಕ್ಷರಾದ **ಶ್ರೀ ಜಿ.ರಾಮಕೃಷ್ಣರವರಿಗೆ** ಮತ್ತು ಉಪಾಧ್ಯಕ್ಷರು ಹಾಗೂ ನಗರಸಭಾ ಸದಸ್ಯರವರುಗಳಿಗೆ ಮತ್ತು ಪತ್ರಿಕಾ ಮಾಧ್ಯಮದವರಿಗೆ ಸ್ವಾಗತವನ್ನು ಕೋರಿ, ಮಾಜಿ ರಾಷ್ಟ್ರಪತಿ ಸನ್ಮಾನ್ಯ ಶ್ರೀ ವೆಂಕಟರಾಮನ್‌ರವರು ನಿಧನ ಹೊಂದಿರುವುದರಿಂದ ಸದರಿಯವರ ಆತ್ಮಕ್ಕೆ ಶಾಂತಿಕೋರಿ ಸಭೆಯಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಮತ್ತು ದೊಡ್ಡಬಳ್ಳಾಪುರ ನಗರದಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿ ನಡೆಯುತ್ತಿರುವ ಸಮಯದಲ್ಲಿ ಮೃತಳಾಗಿರುವ ಕೂಲಿ ಕಾರ್ಮಿಕಳಿಗೂ ಸಹ ಸಂತಾಪವನ್ನು ಸೂಚಿಸಲಾಯಿತು. ನಂತರ ಸಭೆಯನ್ನು ಅಧ್ಯಕ್ಷರ ಅನುಮತಿ ಮೇರೆಗೆ ಪ್ರಾರಂಭಿಸಲಾಯಿತು.

**ವಿಷಯ ಸಂಖ್ಯೆ:1**

ಸರ್ಕಾರದಿಂದ ಬಂದಿರುವ ಸುತ್ತೋಲೆಗಳನ್ನು ಓದಿ ದಾಖಲಿಸುವ ವಿಚಾರ.

**ತೀರ್ಮಾನ ಸಂಖ್ಯೆ:1**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಪೌರಾಡಳಿತ ಸುತ್ತೋಲೆ ಸಂಖ್ಯೆ.ಪೌನಿ/ನಿನ/ಇತರೆ/44/04-05 ದಿನಾಂಕ:19-11-2008ರ ಸುತ್ತೋಲೆಯಂತೆ ಕ್ರಮವಹಿಸಲು ತಿಳಿಸಿದರು. ಹಾಗೂ ಸರ್ಕಾರದ ಮತ್ತೊಂದು ಸುತ್ತೋಲೆ ಸಂಖ್ಯೆ.ನಅಇ/23/ಎಸಿಬಿ/2008 ದಿನಾಂಕ:17-11-2008ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ನಗರಸಭೆಯ ಆಸ್ತಿಗಳ ರಕ್ಷಣೆಗಾಗಿ ಕ್ರಮ ಕೈಗೊಳ್ಳಲು ಹಾಗೂ ನಗರಸಭೆಯ ಸ್ವತ್ತುಗಳಿಗೆ ಫೆನ್ಸಿಂಗ್ ಹಾಕಲು ಸೂಚಿಸಲಾಯಿತು. ಅಲ್ಲದೇ ಡಿ ಕ್ರಾಸ್ ರಸ್ತೆಯ ಎಲ್.ಐ.ಸಿ. ಕಛೇರಿಯ ಪಕ್ಕದಲ್ಲಿರುವ ಜಮೀನು ಬಹಳ ಬೆಲೆಬಾಳುವ ಸ್ವತ್ತಾಗಿದ್ದು, ಇದನ್ನು ಕೌನ್ಸಿಲ್ ನಿರ್ಣಯಕ್ಕೆ ಬಾರದೇ ಖಾತೆ ಮಾಡಿರುತ್ತಾರೆ. ಆದುದರಿಂದ ಈ ಕೂಡಲೇ ಈ ಹಿಂದೆ ಸಭೆಯಲ್ಲಿ ತೀರ್ಮಾನಿಸಿರುವಂತೆ ಬೆಲೆಬಾಳುವ ನಗರಸಭಾ ಸ್ವತ್ತನ್ನು ಉಳಿಸಿಕೊಂಡು ಬೇರೆ ಜಾಗವನ್ನು ಗೊತ್ತುಪಡಿಸಿ ನೀಡಲು ಸಭೆಯಲ್ಲಿ ಚರ್ಚಿಸಲಾಯಿತು. ಅಲ್ಲದೇ ಕೌನ್ಸಿಲ್ ಸಭೆಯಲ್ಲಿ ನಿಗಧಿತ ಜಾಗವನ್ನು ನೀಡಲು ತೀರ್ಮಾನಿಸದೇ ಇರುವುದರಿಂದ ಈ ಜಾಗದ ಬದಲಾಗಿ ಈ ಹಿಂದಿನ ಸಭೆಯಲ್ಲಿ ತೀರ್ಮಾನಿಸಿರುವಂತೆ ಶ್ರೀ ಎಲ್.ಎಸ್. ಶಾರದಮ್ಮ ಮತ್ತು ಡಿ.ಸಿ. ಶಿವಣ್ಣ ಮತ್ತು ಶ್ರೀ ಜೆ.ಎಸ್. ಜಗದೀಶ್ ರವರಿಗೆ ಬೇರೆ ಜಾಗಗಳಲ್ಲಿ ಪರಿಶೀಲಿಸಿ ಬದಲಿ ನಿವೇಶನವನ್ನು ನೀಡುವಂತೆ ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಿರುವಂತೆ, ಈ ಬಗ್ಗೆ ಪೌರಾಯುಕ್ತರು ಮಾತನಾಡಿ ಸದರಿ ವಿಷಯದ ಬಗ್ಗೆ ಪೂರ್ಣವಾಗಿ ಪರಿಶೀಲಿಸಿ, ಮಾನ್ಯ ಜಿಲ್ಲಾಧಿಕಾರಿಗಳವರಿಗೆ ವರದಿ ಮಾಡುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ನಂತರ ಉಳಿದ ಸುತ್ತೋಲೆ ಪತ್ರಗಳನ್ನು ಓದಿ ಅನುಮೋದಿಸಲಾಯಿತು.

-2-

**ವಿಷಯ ಸಂಖ್ಯೆ:2**

ಹಿಂದಿನ ಸಭೆಗಳ ನಡವಳಿಕೆಗಳನ್ನು ಓದಿ ದಾಖಲಿಸುವ ವಿಚಾರ,

**ತೀರ್ಮಾನ ಸಂಖ್ಯೆ:2**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ದಿನಾಂಕ:31-10-2008ರಂದು ನಡೆದ ಸಾಮಾನ್ಯ ಸಭೆಯಲ್ಲಿ ಮೊದಲಿಗೆ ಸ್ವಾಗತವನ್ನು ಕೋರುವ ವೇಳೆಯಲ್ಲಿ ಪತ್ರಿಕಾ ಜಾಹಿರಾತುದಾರರಿಗೆ ಎಂಬುದಾಗಿ ತಪ್ಪಾಗಿ ದಾಖಲಿಸಿರುವುದನ್ನು ಪತ್ರಿಕಾ ಮಾಧ್ಯಮದವರಿಗೆ ಎಂಬುದಾಗಿ ತಿದ್ದುಪಡಿ ಮಾಡಿಕೊಳ್ಳಲು ಸೂಚಿಸಲಾಯಿತು. ಹಾಗೂ ಶ್ರೀ ಮಲ್ಲಿಕಾರ್ಜುನ್, ಸದಸ್ಯರು ಮಾತನಾಡಿ ಶೇ.18ರ ನಿಧಿಯಡಿಯಲ್ಲಿ ಕೈಗೊಂಡಿರುವ ಕ್ರಿಯಾ ಯೋಜನೆಯ ಬಗ್ಗೆ ಅಸಮಾದಾನವನ್ನು ವ್ಯಕ್ತಪಡಿಸಿ ಮೂರು ಜನ ಸದಸ್ಯರು ಪರಿಶಿಷ್ಟ ಜಾತಿ/ಪಂಗಡಗಳ ವರ್ಗಗಳಿಂದ ಆಯ್ಕೆಯಾಗಿದ್ದು, ಮೂರು ಜನ ಸದಸ್ಯರ ಅಭಿಪ್ರಾಯವನ್ನು ಸಂಗ್ರಹಿಸದೆ ಸರ್ವಾಧಿಕಾರಿಯಾಗಿ ಕ್ರಿಯಾ ಯೋಜನೆಯನ್ನು ಮಾಡಿರುತ್ತಾರೆ ಎಂಬುದಾಗಿ ಅಸಮಾದಾನವನ್ನು ವ್ಯಕ್ತಪಡಿಸಿದರು.

ಈ ವಿಷಯದ ಬಗ್ಗೆ ಅಧ್ಯಕ್ಷರು ಮಾತನಾಡಿ 4.10ಕೋಟಿಗಳ ಕ್ರಿಯಾ ಯೋಜನೆ ಮಾಡಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಹಿಂದಿನ ಸಭೆಯಲ್ಲಿ ನನಗೆ ಸರ್ವಾನುಮತದಿಂದ ಅಧಿಕಾರ ನೀಡಿರುವುದರಿಂದ ಅದೇ ರೀತಿ 31 ವಾರ್ಡ್‌ಗಳಿಗೂ ತಲಾ ರೂ.6.00ಲಕ್ಷಗಳ ಅನುದಾನವನ್ನು ನೀಡಿದ್ದು, ಅದರಂತೆ ಶೇ.18ರ ಕ್ರಿಯಾ ಯೋಜನೆಯನ್ನು ಸಹ ಮಾಡಲಾಗಿರುತ್ತೆ ಎಂಬುದಾಗಿ ತಿಳಿಸಿದರು.

ಶೇ.18ರ ಕ್ರಿಯಾ ಯೋಜನೆಗೆ ಶ್ರೀಮತಿ ಜಯಮ್ಮ, ಶ್ರೀಮತಿ ಎನ್.ಮಂಜುಳ ಹಾಗೂ ಶ್ರೀ ಬಿ.ಜಿ. ಹೇಮಂತರಾಜು, ನಗರಸಭಾ ಸದಸ್ಯರುಗಳು ವಿರೋಧ ವ್ಯಕ್ತಪಡಿಸಿದರು. ಹಾಗೂ ನಗರಸಭಾ ನಿಧಿಯಡಿ 60.00ಲಕ್ಷ ರೂ.ಗಳಲ್ಲಿ ಹಿಂದುಳಿದ ಪ್ರದೇಶಗಳಿಗೆ ಪ್ರಾಮುಖ್ಯತೆಯನ್ನು ನೀಡಲು ಅಧ್ಯಕ್ಷರು ಗಮನಹರಿಸಬೇಕು, ಈಗಾಗಲೇ ಶೇ.18ರ ಕ್ರಿಯಾ ಯೋಜನೆಯಲ್ಲಿ ಕಾಯ್ದಿರಿಸಿರುವ 25.00ಲಕ್ಷ ರೂ.ಗಳಲ್ಲಿ ಎಲ್ಲ ಸದಸ್ಯರಿಗೂ ಸಮಾನ ಅವಕಾಶ ಕಲ್ಪಿಸಿಕೊಡಬೇಕು ಮತ್ತು ಅಧ್ಯಕ್ಷರು ಅನುಚಿತವಾಗಿ ವರ್ತಿಸಬಾರದು ಎಂಬುದಾಗಿ ಶ್ರೀ ತ.ನ.ಪ್ರಭುದೇವ್, ಸದಸ್ಯರು ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

ಈ ಬಗ್ಗೆ ಶ್ರೀ ಕೆ.ಎಂ. ಹನುಮಂತರಾಯಪ್ಪರವರು ಸದಸ್ಯರು ಮಾತನಾಡಿ, ನಗರಸಭಾ ನಿಧಿಯಡಿಯಲ್ಲಿ ಕಾಯ್ದಿರಿಸಿರುವ ಶೇ.18ರ ಅನುದಾನದಲ್ಲಿ ಎಲ್ಲಾ ಸದಸ್ಯರಿಗೂ ಪೂರ್ಣ ಪ್ರಮಾಣದಲ್ಲಿ ಸಮಾನವಕಾಶ ಕಲ್ಪಿಸಬೇಕು ಎಂಬುದಾಗಿ ತಿಳಿಸಿದಾಗ, ಅಧ್ಯಕ್ಷರು ಮಾತನಾಡಿ ಈಗ ಅನುದಾನ ನೀಡದೇ ಇರುವ ಕೊಳಚೆ ಪ್ರದೇಶಗಳಿಗೆ ಮುಂದಿನ ಎಸ್.ಎಫ್.ಸಿ. ಹಾಗೂ ಶೇ.18ರ ನಿಧಿಯಡಿಯಲ್ಲಿ ಗಮನ ನೀಡಲು ಸಭೆಯಲ್ಲಿ ಚರ್ಚಿಸಲಾಗುವುದು ಎಂದು ತಿಳಿಸಿದರು.

ಇದಕ್ಕೆ ಅಧ್ಯಕ್ಷರ ಪರವಾಗಿ ಶ್ರೀ ಕೆ.ಎಂ.ಹನುಮಂತರಾಯಪ್ಪರವರು ಮಾತನಾಡಿ ಶೇ.18ರ ನಿಧಿಯಡಿಯಲ್ಲಿ ಸಣ್ಣ ಲೋಪವಾಗಿದ್ದು, ಇದನ್ನು ಮುಂದೆ ಸರಿಪಡಿಸಿಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ಹಾಗೂ ದಿನಾಂಕ:31-10-2008ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.38/4, 38/5ರಲ್ಲಿ ತೀರ್ಮಾನಿಸಿರುವಂತೆ ಬಹುಮತ ಎಂಬುದಾಗಿರುವುದನ್ನು ಸರ್ವಾನುಮತದಿಂದ ಎಂಬುದಾಗಿ ತಿದ್ದುಪಡಿ ಮಾಡಿಕೊಳ್ಳಲು ತೀರ್ಮಾನಿಸಲಾಯಿತು. ಹಾಗೂ ವಿಷಯ ಸಂಖ್ಯೆ.36ರ ರಲ್ಲಿ ಚರ್ಚಿಸಿ ತೀರ್ಮಾನಿಸಿರುವಂತೆ ವಾಸ ಸ್ಥಳ ದೃಢೀಕರಣ ಪತ್ರಕ್ಕೆ ರೂ.10/-ರಂತೆ ಶುಲ್ಕ ನಿಗಧಿಪಡಿಸಿ ವಿತರಿಸಲು ತೀರ್ಮಾನಿಸಲಾಯಿತು.

**ದಿನಾಂಕ:12-02-2009ರಂದು ಮುಂದುವರೆದ ನಡೆದ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

| ಸದಸ್ಯರುಗಳು | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| | 29 | 02 | 31 |

**ವಿಷಯ ಸಂಖ್ಯೆ:3**

ಸೆಪ್ಟಂಬರ್-2008 ರಿಂದ ಡಿಸೆಂಬರ್-2008ರ ವರೆಗಿನ ಮಾಹೆಗಳ ಜನನ-ಮರಣಗಳ ವಿವರಗಳನ್ನು ಓದಿ ದಾಖಲಿಸುವ ವಿಚಾರ.

| ಕ್ರ.ಸಂ | ಮಾಹೆವಾರು | ಜನನ | | | ಮರಣ | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಸೆಪ್ಟಂಬರ್-2008 | 56 | 105 | 161 | 07 | 02 | 09 |
| 2 | ಅಕ್ಟೋಬರ್-2008 | 132 | 134 | 266 | 03 | 01 | 04 |
| 3 | ನವೆಂಬರ್-2008 | 07 | 37 | 44 | 46 | 19 | 65 |
| 4 | ಡಿಸೆಂಬರ್-2008 | 11 | 18 | 29 | 37 | 12 | 49 |

**ತೀರ್ಮಾನ ಸಂಖ್ಯೆ:3**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಸೆಪ್ಟಂಬರ್-2008 ರಿಂದ ಡಿಸೆಂಬರ್-2008ರ ವರೆಗಿನ ಮಾಹೆಗಳ ಜನನ-ಮರಣಗಳ ವಿವರಗಳನ್ನು ಓದಿ ದಾಖಲಿಸಲಾಯಿತು.

**ವಿಷಯ ಸಂಖ್ಯೆ:4**

ಸೆಪ್ಟಂಬರ್-2008 ರಿಂದ ಡಿಸೆಂಬರ್-2008ರ ವರೆಗಿನ ಮಾಹೆಗಳ ಜಮಾ-ಖರ್ಚುಗಳನ್ನು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:4**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಮಾನ್ಯ ಮುಖ್ಯ ಮಂತ್ರಿಗಳವರ ಸಭೆಗೆ 70,000/-ರೂ.ಗಳನ್ನು ಖರ್ಚು ಮಾಡಿದ್ದು, ಸರ್ಕಾರದ ಸುತ್ತೋಲೆಯಂತೆ 50,000/-ರೂ.ಗಳ ಅವಕಾಶವಿದ್ದು, 20,000/-ರೂ.ಗಳ ಹೆಚ್ಚುವರಿ ಮೊತ್ತವನ್ನು ಪಾವತಿಸಲಾಗಿರುತ್ತದೆ. ಮತ್ತು ಟೆಲಿಪೋನ್ ಬಿಲ್ಲುಗಳ ಬಾಬ್ತು ಹೆಚ್ಚಾಗಿರುವುದರಿಂದ ಸರ್ಕಾರದ ಸುತ್ತೋಲೆಯಂತೆ ಎಷ್ಟು ಅವಶ್ಯಕವಾಗಿದೆಯೋ ಅಷ್ಟನ್ನು ಮಾತ್ರ ಬಳಸಿಕೊಳ್ಳುವಂತೆ ಸಭೆಯಲ್ಲಿ ಚರ್ಚಿಸಲಾಯಿತು. ಹಾಗೂ ವಿದ್ಯುತ್‌ಚ್ಛಕ್ತಿ ಬಿಲ್ಲು ನಾಲ್ಕು ತಿಂಗಳುಗಳಿಂದ ವಸೂಲಿಸದೇ ತಡವಾಗಿ ವಸೂಲಿಸಿದ್ದು, ಈ ಬಗ್ಗೆ ನಮ್ಮ ವಿರೋಧವಿದೆಯೆಂದು ಶ್ರೀ ತ.ನ.ಪ್ರಭುದೇವ್ ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಅರ್ಜಿಯನ್ನು ನೀಡಿರುವುದನ್ನು ಸಭೆಯ ನಡವಳಿಯಲ್ಲಿ ಚಿಟಕಾಯಿಸಲಾಯಿತು.

ಇದಕ್ಕೆ ಪೌರಾಯುಕ್ತರು ಮಾತನಾಡಿ ಕಛೇರಿಯ ಎಲ್ಲಾ ಸಿಬ್ಬಂದಿ ವರ್ಗದವರು ಚುನಾವಣಾ ಕಾರ್ಯದಲ್ಲಿ ಹಾಗೂ ಪಡಿತರ ಚೀಟಿಯ ಸರ್ವೆ ಕಾರ್ಯದಲ್ಲಿ ತೊಡಗಿರುವುದರಿಂದ ವಸೂಲಾತಿಯು ತಡವಾಗಿರುತ್ತದೆ. ಇನ್ನು ಮುಂದೆ ಈ ರೀತಿಯ ನಡೆಯದಂತೆ ಕ್ರಮವಹಿಸಲಾಗುತ್ತದೆ ಎಂಬುದಾಗಿ ತಿಳಿಸಿದರು.

ಐ.ಇ.ಸಿ. ಸಿಬ್ಬಂದಿಯವರು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಕ್ರಮವಹಿಸಲು ತಿಳುವಳಿಕೆ ಪತ್ರವನ್ನು ನೀಡಲು ಸೂಚಿಸಲಾಯಿತು. ಹಾಗೂ ಎನ್.ಎಂ.ಆರ್. ವೇತನ ಲೆಕ್ಕದಲ್ಲಿ ವ್ಯತ್ಯಾಸವಾಗಿರುವ ಮೊತ್ತ ಸುಮಾರು ರೂ.20,000/-ಗಳ ಲೆಕ್ಕ ಸರಿಪಡಿಸಿಕೊಳ್ಳಲು ಸೂಚಿಸಲಾಯಿತು. ತಪ್ಪಿದಲ್ಲಿ ಸಂಬಂಧಿಸಿದ ಶಾಖೆಯ ಅಧಿಕಾರಿಗಳಿಂದ ವಸೂಲಿ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:5**

ದಿನಾಂಕ:31-10-2008 ಮತ್ತು 03-11-2008ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.8ನ್ನು ಮುಂದೂಡಿದ್ದು, ಈ ವಿಚಾರವಾಗಿ ನಗರದ 5ವಾರ್ಡ್‌ಗಳಲ್ಲಿ ಹಾಗೂ ಮಾರುಕಟ್ಟೆಯ ತ್ಯಾಜ್ಯಗಳನ್ನು ಸಂಗ್ರಹಿಸಿ ಎರೆಹುಳು ಗೊಬ್ಬರ ತಯಾರಿಸಲು ಸ್ತ್ರೀ ಶಕ್ತಿ ಸಂಘಗಳು ಇಚ್ಚಿಸಿದ್ದು, ಸದರಿಯವರಿಗೆ ಘನತ್ಯಾಜ್ಯ ವಸ್ತು ವಿಲೇವಾರಿ ಸ್ಥಳದಲ್ಲಿ ಸ್ಥಳಾವಕಾಶ ನೀಡಲು ಹಾಗೂ ತೊಟ್ಟಿಗಳನ್ನು ನಿರ್ಮಿಸಲು ಬೇಕಾಗುವ ಸಾಮಗ್ರಿಗಳನ್ನು ಒದಗಿಸಿಕೊಡುವ ವಿಚಾರ.

**ತೀರ್ಮಾನ ಸಂಖ್ಯೆ:5**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಒಂದು ವರ್ಷದ ಕಾಲಾವಧಿಗೆ ಎರೆಹುಳು ಗೊಬ್ಬರ ತಯಾರಿಸಲು ಸ್ತ್ರೀ ಶಕ್ತಿ ಸಂಘದವರಿಗೆ ಘನತ್ಯಾಜ್ಯ ವಸ್ತು ವಿಲೇವಾರಿ ಸ್ಥಳದಲ್ಲಿ ಸ್ಥಳಾವಕಾಶ ಕಲ್ಪಿಸಲು ಹಾಗೂ ತೊಟ್ಟಿಗಳನ್ನು ನಿರ್ಮಿಸಲು ಬೇಕಾಗುವ ಸಾಮಗ್ರಿಗಳನ್ನು ನಗರಸಭಾ ವತಿಯಿಂದ ಒದಗಿಸಿಕೊಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:6**

ದಿನಾಂಕ:31-10-2008 ಮತ್ತು 03-11-2008ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.13ರಲ್ಲಿ ಪ್ರಾಥಮಿಕ ಕಸ ಸಂಗ್ರಹಣೆಯ ಸ್ತ್ರೀ ಶಕ್ತಿ ಸಂಘದವರಿಗೆ ಸರ್ಕಾರದ ಸುತ್ತೋಲೆಯಂತೆ ನಗರಸಭಾ ವತಿಯಿಂದ 6 ತಿಂಗಳ ಮಟ್ಟಿಗೆ ಪ್ರೋತ್ಸಾಹ ಧನವಾಗಿ ಶೇ.30ರಷ್ಟು ಹಣ ಪಾವತಿಸುವ ವಿಚಾರ.

**ತೀರ್ಮಾನ ಸಂಖ್ಯೆ:6**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಮೊದಲಿಗೆ ಸಲಕರಣೆಗಳನ್ನು ಸ್ತ್ರೀ ಶಕ್ತಿ ಸಂಘದವರಿಗೆ ಒದಗಿಸಿ, ಮುಂದೆ ಬರುವಂತಹ ಮಹಿಳಾ ಸಂಘಗಳಿಗೆ ಕಾರ್ಯನಿರ್ವಹಿಸುವಂತೆ ಹಾಗೂ ಶೇ.20ರಷ್ಟು ಪ್ರೋತ್ಸಾಹ ಧನವನ್ನು ಕಸದಗಾಡಿಯನ್ನು ತಳ್ಳುವವರಿಗೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಹಾಗೂ ಮಾರುಕಟ್ಟೆಯಲ್ಲಿ ಎಲ್ಲಾ ಅಂಗಡಿ ಮಾಲೀಕರಿಗೆ ಒಟ್ಟಾಗಿ ಒಂದು ಸಭೆಯನ್ನು ಏರ್ಪಡಿಸಿ ತ್ಯಾಜ್ಯ ವಸ್ತುಗಳನ್ನು ಒಂದು ಡಬ್ಬದಲ್ಲಿ ಹಾಕಿ ನೈರ್ಮಲ್ಯ ಕಾಪಾಡುವಂತೆ ತಿಳುವಳಿಕೆ ನೀಡಲು ಮತ್ತು ನಗರಸಭಾ ವತಿಯಿಂದ ಕಸದ ಡಬ್ಬಿಯನ್ನು ವಿತರಿಸಿ, ತ್ಯಾಜ್ಯ ವಸ್ತುಗಳನ್ನು ಡಬ್ಬಿಯಲ್ಲಿ ಶೇಖರಿಸುವಂತೆ ಮತ್ತು ಕಸದ ಡಬ್ಬಿ ಇಲ್ಲದಿದ್ದಲ್ಲಿ ಅಂಗಡಿ ಮಾಲೀಕರೇ ತಮ್ಮ ಸ್ವಂತ ಹಣದಿಂದ ಕಸದ ಡಬ್ಬಿಯನ್ನು ಖರೀದಿಸಿ ಇಟ್ಟುಕೊಳ್ಳುವಂತೆ ತಿಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:7**

ದಿನಾಂಕ:31-10-2008 ಮತ್ತು 03-11-2008ರಂದು ನಡೆದ ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.24ರ ವಿಚಾರವನ್ನು ಮುಂದೂಡಿದ್ದ ವಿಚಾರವಾದ ನಗರಸಭೆಯ ಆಡಳಿತ ಶಾಖೆಯ ಕಟ್ಟಡ ಮತ್ತು ನಾಗರೀಕ ಸೇವಾ ಕೇಂದ್ರ ಕಟ್ಟಡಗಳಿಗೆ ವಿದ್ಯುತ್ ಕಡಿತಗೊಂಡಾಗ ಪರ್ಯಾಯಾಯ ವ್ಯವಸ್ಥೆಗೆ 2 ಕೆ.ವಿ.ಎ. ಸಾಮರ್ಥ್ಯದ ಯು.ಪಿ.ಎಸ್. ಅಳವಡಿಸುವ ವಿಚಾರ.

**ತೀರ್ಮಾನ ಸಂಖ್ಯೆ:7**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರಸಭೆಯ ಆಡಳಿತ ಶಾಖೆಯ ಕಟ್ಟಡ ಮತ್ತು ನಾಗರೀಕ ಸೇವಾ ಕೇಂದ್ರ ಕಟ್ಟಡಗಳಿಗೆ ವಿದ್ಯುತ್ ಕಡಿತಗೊಂಡಾಗ ಪರ್ಯಾಯಾಯ ವ್ಯವಸ್ಥೆಗೆ 2.5 ಕೆ.ವಿ.ಎ. ಸಾಮರ್ಥ್ಯದ ಯು.ಪಿ.ಎಸ್. ಖರೀದಿಸಲು ಕೊಟೇಶನ್ ಕರೆದು ಕ್ರಮಕೈಗೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:8**

ದಿನಾಂಕ:31-10-2008 ಮತ್ತು 03-11-2008ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.25ರ ವಿಚಾರವಾದ ಕೆ.ಎಂ.ಆರ್.ಪಿ. ಯೋಜನಾ ಸಿಬ್ಬಂದಿಗೆ ಹಾಗೂ ನಗರಸಭಾ ಸಿಬ್ಬಂದಿಗೆ ಸ್ಥಳಾವಕಾಶ ಕಲ್ಪಿಸಲು ನಾಗರೀಕ ಸೇವಾ ಕೇಂದ್ರ ಕಟ್ಟಡದ ಮೇಲ್ಭಾಗದಲ್ಲಿ 1ನೇ ಮಹಡಿ ನಿರ್ಮಿಸುವ ವಿಚಾರ.

**ತೀರ್ಮಾನ ಸಂಖ್ಯೆ:8**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಕೆ.ಎಂ.ಆರ್.ಪಿ. ಯೋಜನಾ ಸಿಬ್ಬಂದಿಗೆ ಹಾಗೂ ನಗರಸಭಾ ಸಿಬ್ಬಂದಿಗೆ ಸ್ಥಳಾವಕಾಶ ಕಲ್ಪಿಸಲು ನಾಗರೀಕ ಸೇವಾ ಕೇಂದ್ರ ಕಟ್ಟಡದ ಮೇಲ್ಭಾಗದಲ್ಲಿ 1ನೇ ಮಹಡಿ ನಿರ್ಮಿಸುವ ಬದಲಾಗಿ ನಗರಸಭೆಯ ಮುಂಭಾಗದಲ್ಲಿರುವ ಜಾಗದಲ್ಲಿ ಹೊಸ ಕಟ್ಟಡವನ್ನು ನಿರ್ಮಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:9**

ದಿನಾಂಕ:07-01-2009ರಂದು ಜಿಲ್ಲಾ ಸ್ಥಳೀಯ ಸಮಿತಿ ಸಭೆಯು ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಸಮಿತಿಯ ಎಲ್ಲಾ ಸದಸ್ಯರುಗಳು ಭಾಗವಹಿಸಿ ಕೆ.ಎಂ.ಆರ್.ಪಿ. ಯೋಜನೆಯ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ದೊಡ್ಡಬಳ್ಳಾಪುರ ನಗರವನ್ನು 3 ವಲಯಗಳನ್ನಾಗಿ ವಿಂಗಡಿಸಿ, ವಲಯ I, II ಮತ್ತು III ಎಂದು ವಿಂಗಡಿಸಲಾಗಿದೆ. ಪ್ರಸಕ್ತ ಹೆಚ್ಚು ಜನಸಾಂದ್ರತೆ ಇರುವ ವಲಯ- ಖಖಖ ರಲ್ಲಿರುವ 8 ವಿಭಾಗಗಳಲ್ಲಿನ (A, B, C, D, E, F,G) ಹಳೇ ಪಟ್ಟಣ ವ್ಯಾಪ್ತಿಯ 6 ಉಪ-ವಿಭಾಗಗಳಾದ (A, B, C, D, E, F,G) ರಲ್ಲಿ ಮೊದಲನೇ ಹಂತದಲ್ಲಿ ಅಂದಾಜು ಪಟ್ಟಿ ಮೊತ್ತ ರೂ.29.56 ಕೋಟಿಗಳಲ್ಲಿ ತೆಗೆದುಕೊಳ್ಳಲು ಶಿಫಾರಸ್ಸು ಮಾಡಿ ಕೆ.ಯು.ಐ.ಡಿ.ಎಫ್.ಸಿ. ಕೇಂದ್ರ ಕಛೇರಿಗೆ ತಾಂತ್ರಿಕ ಅಂಗೀಕಾರ ನೀಡಲು ಸಲ್ಲಿಸಿರುವ ವಿಚಾರ.

**ತೀರ್ಮಾನ ಸಂಖ್ಯೆ:9**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಸದರಿ ಯೋಜನೆಯನ್ನು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ ಸಂಖ್ಯೆ:10**

ದಿನಾಂಕ:15-01-2009ರಂದು ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾಹೆಯ ಪ್ರಗತಿ ಪರಿಶೀಲನೆಯನ್ನು ಮಾಡಿಲಾಯಿತು. ಈ ಸಭೆಯಲ್ಲಿ ದೊಡ್ಡಬಳ್ಳಾಪುರ ನಗರಸಭೆಗೆ ಕೆ.ಎಂ.ಆರ್.ಪಿ. ಯೋಜನೆಗೆ ಅಂಗೀಕರವಾಗಿರುವ ಮೊತ್ತ ರೂ.22.00 ಕೋಟಿಗಳ ಶೇ.10ರ ವಂತಿಕೆ ಸ್ಥಳೀಯ ಸಮಿತಿಯಿಂದ ಜಮಾ ಮಾಡುವ ಪ್ರಯುಕ್ತ ಉಳಿಕೆ ಎರಡು ಕಂತುಗಳ ಮೊತ್ತ ರೂ.47.14 ಲಕ್ಷಗಳ ಮೊತ್ತವನ್ನು ಟೆಂಡರ್ ಪ್ರಕ್ರಿಯೆ ಪ್ರಾರಂಭಿಸುವ ಮೊದಲು ಜಮಾ ಮಾಡಲು ನಿರ್ದೇಶಿಸಿದರು. ಹಾಗೂ ದಿನಾಂಕ:20-01-2009ರಂದು ತಾಂತ್ರಿಕ ಸಮಿತಿಯ ಸಭೆಯು ಕೆ.ಯು.ಐ.ಡಿ.ಎಫ್.ಸಿ. ಕಛೇರಿಯಲ್ಲಿ ನಡೆಯಲಿದ್ದು, ಸದರಿ ಸಭೆಯಲ್ಲಿ ಮುಖ್ಯ ಇಂಜಿನಿಯರ್ ನಿರ್ದೇಶನದಂತೆ ಅಂದಾಜು ಪಟ್ಟಿ ಅನುಮೋದಿಸಿಕೊಂಡು ಜರೂರಾಗಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸೂಚಿಸಿರುವ ವಿಚಾರ.

**ತೀರ್ಮಾನ ಸಂಖ್ಯೆ:10**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ ಸಂಖ್ಯೆ:11**

ನಗರಸಭಾ ವ್ಯಾಪ್ತಿಯಲ್ಲಿ ಬರುವ ಬೀದಿ ದೀಪಗಳ ನಿರ್ವಹಣೆಯ ಕಾಲಾವಧಿಯು ದಿನಾಂಕ: 14-12-2008 ರಂದು ಮುಕ್ತಾಯವಾಗಿದ್ದು, ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಹಾಲಿ ಕಾರ್ಯನಿರ್ವಹಿಸುತ್ತಿರುವ ಡಿ.ಎ.ಜಿ.ಪವರ್ ಸಿಸ್ಟ್ಸಂರವರ ಗುತ್ತಿಗೆ ಅವಧಿಯನ್ನು ಸಾಮಾನ್ಯ ಸಭೆಯ ನಿರ್ಣಯದ ಷರತ್ತಿಗೊಳಪಟ್ಟು ಮುಂದುವರೆಸಿರುವುದನ್ನು ಹಾಗೂ ಟೆಂಡರ್ ಷರತ್ತಿನಂತೆ ಮತ್ತೆ ಒಂದು ವರ್ಷ ಗುತ್ತಿಗೆ ಕಾಲಾವಧಿಯನ್ನು ಮುಂದುವರೆಸುವ ವಿಚಾರ.

**ತೀರ್ಮಾನ ಸಂಖ್ಯೆ:11**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರಸಭಾ ವ್ಯಾಪ್ತಿಯಲ್ಲಿ ಬರುವ ಬೀದಿ ದೀಪಗಳ ನಿರ್ವಹಣೆಯ ಕಾಲಾವಧಿಯು ದಿನಾಂಕ:14-12-2008 ರಂದು ಮುಕ್ತಾಯವಾಗಿದ್ದು, ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಹಾಲಿ ಕಾರ್ಯನಿರ್ವಹಿಸುತ್ತಿರುವ ಡಿ.ಎ.ಜಿ.ಪವರ್ ಸಿಸ್ಟ್ಸಂರವರಿಗೆ ಮುಂದುವರೆಸಿರುವುದನ್ನು ಮತ್ತು ಟೆಂಡರ್ ಷರತ್ತಿನಂತೆ ದಿನಾಂಕ:14-12-2009ರ ವರಗೆ ಒಂದು ವರ್ಷದ ಅವಧಿಗೆ ಮುಂದುವರೆಸಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:12**

ದಿನಾಂಕ:31-10-2008 ಮತ್ತು 03-11-2008ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.37ನ್ನು ಮುಂದೂಡಿದ್ದು, ಸದರಿ ವಿಷಯವಾದ ಸ್ಥಾಯಿ ಸಮಿತಿಯನ್ನು ರಚಿಸುವ ವಿಚಾರ.

**ತೀರ್ಮಾನ ಸಂಖ್ಯೆ:12**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಕೆಳಕಂಡ ಸದಸ್ಯರನ್ನು ಸ್ಥಾಯಿ ಸಮಿತಿಯ ಸದಸ್ಯರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

1) ಶ್ರೀ ಆರ್. ಚಂದ್ರಶೇಖರ್
2) ಶ್ರೀ ಜಿ.ವಿ. ಚಂದ್ರಪ್ರಕಾಶ್,
3) ಶ್ರೀಮತಿ ರಾಜಮ್ಮ,
4) ಶ್ರೀ ಡಿ.ಎಂ. ಚಂದ್ರಶೇಖರ್,
5) ಶ್ರೀಮತಿ ಎನ್. ಮಂಜುಳ
6) ಶ್ರೀ ಆರ್. ರವಿಕುಮಾರ್,
7) ಶ್ರೀ ಕೆ.ಎನ್. ರಮೇಶ್,
8) ಶ್ರೀಮತಿ ಶಂಶುನ್ನೀಸಾ
9) ಶ್ರೀಮತಿ ಎಂ.ಮಂಜುಳ
10) ಶ್ರೀ ವಿ.ಎಸ್. ರವಿಕುಮಾರ್
11) ಶ್ರೀ ಫಯಾಜ್ ಪಾಷ

**ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳು:**

**ವಿಷಯ ಸಂಖ್ಯೆ: 13/1**

ಬೀದಿ ಸ್ವಚ್ಛತೆಯ ಟೆಂಡರ್ ದರವನ್ನು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:13/1**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಬೀದಿಸ್ವಚ್ಛತಾ ಕಾರ್ಯಕ್ಕೆ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ಅದರಂತೆ ಬಂದ ಏಳು ಅರ್ಜಿದಾರರಲ್ಲಿ ಕೇವಲ ನಾಲ್ಕು ಗುತ್ತಿಗೆದಾರರು ದಾಸ್ತಾವೇಜು ಪ್ರಸ್ತಾವನೆಯನ್ನು ಮರು ಸಲ್ಲಿಸಿರುತ್ತಾರೆ. ಸಲ್ಲಿಸಿದ್ದ 4 ಗುತ್ತಿಗೆದಾರರಲ್ಲಿ ತಾಂತ್ರಿಕ ಬಿಡ್ ನಲ್ಲಿ 4 ಗುತ್ತಿಗೆದಾರರು ಅರ್ಹರಾಗಿದ್ದು, ದಿನಾಂಕ:10-02-2009ರಂದು ಹಣಕಾಸು ಪ್ರಸ್ತಾವನೆಯನ್ನು ತೆರೆಯಲಾಯಿತು. ಅದರಲ್ಲಿ ಗೌತಮ್ ಎಂಟರ್ ಪ್ರೈಸಸ್, ಮಾರುತಿನಗರ, ದೊಡ್ಡಬಳ್ಳಾಪುರ ರವರು ಉಳಿದವರಿಗಿಂತ ಕಡಿಮೆ ದರ ನಮೂದಿಸಿದ್ದು, ರೂ.1,68,750/-(ಒಂದು ಲಕ್ಷದ ಅರವತ್ತೆಂಟು ಸಾವಿರದ ಏಳುನೂರ ಐವತ್ತು ರೂಪಾಯಿಗಳು ಮಾತ್ರ) ಗಳಾಗಿರುತ್ತದೆ. ತಯಾರಿಸಲಾದ ಅಂದಾಜು ಮೊತ್ತ ರೂ.1,62,500/-ಗಳಿಗಿಂತ 6,250/-(ಆರು ಸಾವಿರದ ಎರಡುನೂರ ಐವತ್ತು ರೂ.ಗಳು) ಅಂದಾಜು ಮೊತ್ತಕ್ಕಿಂತ 3.85% ಹೆಚ್ಚಾಗಿದ್ದು, ಸದರಿ ದರವನ್ನು ಸಭೆಯಲ್ಲಿ ಅನುಮೋದಿಸಿ, ಟೆಂಡರ್ ಪ್ರಕ್ರಿಯೆಯನ್ನು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ: 13/2**

12ನೇ ಹಣಕಾಸು 2007-08ನೇ ಸಾಲಿನ ಮುಕ್ತನಿಧಿ ರೂ.10.00 ಲಕ್ಷಗಳು ಮತ್ತು 2006-07, 2007-08ನೇ ಸಾಲಿನ ರಸ್ತೆ ಮತ್ತು ಸೇತುವೆ ದುರಸ್ಥಿ ಅನುದಾನದ ಉಳಿಕೆ ಮೊತ್ತ ರೂ.3.87 ಲಕ್ಷಗಳಿಗೆ ಕಾಮಗಾರಿಗಳನ್ನು ಕೈಗೊಳ್ಳುವ ವಿಚಾರ.

**ತೀರ್ಮಾನ ಸಂಖ್ಯೆ:13/2**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ 12ನೇ ಹಣಕಾಸು 2007-08ನೇ ಸಾಲಿನ ಮುಕ್ತನಿಧಿ ರೂ.10.00 ಲಕ್ಷಗಳು ಮತ್ತು 2006-07, 2007-08ನೇ ಸಾಲಿನ ರಸ್ತೆ ಮತ್ತು ಸೇತುವೆ ದುರಸ್ಥಿ ಅನುದಾನದ ಉಳಿಕೆ ಮೊತ್ತ ರೂ.3.87 ಲಕ್ಷಗಳಿಗೆ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

| ಕ್ರ. ಸಂ. | ಕಾಮಗಾರಿ ವಿವರ | ಮೊತ್ತ |
|---|---|---|
| | **12ನೇ ಹಣಕಾಸು ಮುಕ್ತನಿಧಿ** | |
| 1 | ಟೆಲಿಫೋನ್ ಎಕ್ಸ್ ಚೇಂಜ್ ಹಿಂಭಾಗದ ರಸ್ತೆಯಲ್ಲಿ ತಡೆಗೋಡೆ ನಿರ್ಮಿಸುವುದು | 72000 |
| 2 | ವಾರ್ಡ್ ನಂ.28ರ ನಾಗಲಾಂಬಿಕೆ ಮನೆಯ ಹತ್ತಿರವಿರುವ ಕೊಳವೆಬಾವಿಯಿಂದ ಮಧುಗಿರಿರಸ್ತೆಯ ಹಾಸ್ಟೆಲ್ ವರೆಗೆ 4" ಮುಖ್ಯ ಪೈಪ್ ಲೈನ್ ಹಾಕುವ ಕೆಲಸ. | 250000 |
| 3 | ವಾರ್ಡ್ ನಂ.27ರ ರೋಜಿಪುರದ ಕೋರ್ಟ್ ರಸ್ತೆಯಲ್ಲಿ 4" ಮುಖ್ಯ ಪೈಪ್ ಲೈನ್ ಹಾಕುವ ಕೆಲಸ. | 200000 |
| 4 | ನಗರಸಭಾ ವ್ಯಾಪ್ತಿಯಲ್ಲಿ ಬರುವ 3 ಕೊಳವೆಬಾವಿಗಳಿಗೆ ಸಬ್ ಮರ್ಸಿಬಲ್ ಮೋಟಾರು ಪಂಪ್,ಕೇಬಲ್ ಮತ್ತು ಕಂಟ್ರೋಲ್ ಪ್ಯಾನಲ್ ಖರೀದಿಸುವ ಕೆಲಸ. | 250000 |
| 5 | ವಾರ್ಡ್ ನಂ.3ರ ಡಿ. ಕ್ರಾಸ್ ಸಾಮಿಲ್ ಹತ್ತಿರ ಕಲ್ವರ್ಟ್ ಕಾಮಗಾರಿ | 17000 |
| 6 | ವಾರ್ಡ್ ನಂ.3ರ ಡಿ.ಕ್ರಾಸ್ ಸಾಮಿಲ್ ಹತ್ತಿರ ಆರ್.ಸಿ.ಸಿ. ಚರಂಡಿ ಮಾಡುವುದು | 47000 |
| 7 | ವಾರ್ಡ್ ನಂ.1ರ ಸುನಿಲ್ ಮನೆ ಮುಂಭಾಗ ಆರ್.ಸಿ.ಸಿ. ಚರಂಡಿ ಮಾಡುವುದು | 95000 |
| 8 | ವಾರ್ಡ್ ನಂ.11ರ ಕರೇನಹಳ್ಳಿ ಗೋವಿಂದಪ್ಪನವರ ಅಂಗಡಿ ಪಕ್ಕದ ರಸ್ತೆಯಲ್ಲಿ ಡೆಕ್ ಸ್ಲ್ಯಾಬ್ ಕಲ್ವರ್ಟ್ ಕಾಮಗಾರಿ | 30000 |
| 9 | ನೇಯ್ಗೆ ಬೀದಿ ಶಾಲೆಯ ಹತ್ತಿರ ಡೆಕ್ ಸ್ಲ್ಯಾಬ್ ಕಲ್ವರ್ಟ್ ಮಾಡುವುದು | 50000 |

| 12ನೇ ಹಣಕಾಸು ರಸ್ತೆ ಮತ್ತು ಸೇತುವೆ ದುರಸ್ಥಿ | | |
|---|---|---|
| 10 | ಜೆ.ಸಿ. ಸರ್ಕಲ್‌ನಿಂದ ಹಳೇ ಬಸ್ ನಿಲ್ದಾಣದ ಮುಖಾಂತರ ಗಾಂಧಿ ಸರ್ಕಲ್‌ವರೆಗೆ ಆಯ್ದ ಭಾಗಗಳಲ್ಲಿ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕೆಲಸ | 375000 |

ಹಾಗೂ ಈ ಹಿಂದೆ ಬಾಕಿ ಇರುವ ಕೊಳಾಯಿ ಅರ್ಜಿಗಳ ಸಂಬಂಧ ಕ್ರಮವಹಿಸಿಲು ಹಾಗೂ ನಂತರ ಕಛೇರಿಗೆ ಬರುವ ಅರ್ಜಿಗಳ ಬಗ್ಗೆ ಸಭೆಗೆ ಮಂಡಿಸಿ, ಸಭೆಯ ತೀರ್ಮಾನದಂತೆ ಕ್ರಮ ಕೈಗೊಳ್ಳಲು ಚರ್ಚಿಸಲಾಯಿತು.

**ವಿಷಯ ಸಂಖ್ಯೆ: 13/2**

ನಗರಸಭೆಯ ಐ.ಡಿ.ಎಸ್.ಎಂ.ಟಿ. ಮತ್ತು ನಗರಸಭಾ ಮಳಿಗೆಗಳನ್ನು 2008–09ನೇ ಸಾಲಿಗೆ ನೀಡಿರುವ ಬಾಡಿಗೆಯ ಕಾಲಾವಾಧಿ ಮುಗಿದಿರುವ ವಿಚಾರ.

**ತೀರ್ಮಾನ ಸಂಖ್ಯೆ:13/1**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಐ.ಡಿ.ಎಸ್.ಎಂ.ಟಿ. ಮತ್ತು ನಗರಸಭಾ ಮಳಿಗೆಗಳ 2009–10ನೇ ಸಾಲಿಗೆ ಕಾನೂನಿ ರೀತ್ಯಾ ಹರಾಜು ಪ್ರಕ್ರಿಯೆ ಕೈಗೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

---

**ಸಹಿ:–**
**(ಜಿ.ರಾಮಕೃಷ್ಣ)**
**ಅಧ್ಯಕ್ಷರು,**
**ನಗರಸಭೆ, ದೊಡ್ಡಬಳ್ಳಾಪುರ.**

**“ನಕಲು ಪ್ರತಿ “**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**